KAHS610019842020

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಕುಸುಮ.ವಿ.** ಬಿ.ಎ.ಎಲ್., ಎಲ್ ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಸಿ.ಸಿ. ಸಂಖ್ಯೆ:799/2020**
**ದಿನಾಂಕ : 08 ನೇ ಜುಲೈ 2026**

**ಪಿರ್ಯಾದಿದಾರರು** : ರಾಜ್ಯದ ಪರವಾಗಿ
ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ.

**(ಪ್ರತಿನಿಧಿಸುವವರು : ಸಹಾಯಕ ಸರ್ಕಾರಿ ಅಭಿಯೋಜಕರಿಂದ)**

**ವಿರುದ್ಧ**

**ಆರೋಪಿ** :

1. ಲೊಕೇಶ ಹೆಚ್.ಎಂ,
ಬಿನ್ ಎಸ್.ಎಂ ನಿಂಗಪ್ಪ,
ಸುಮಾರು 44 ವರ್ಷ,
ವಾಸಃ ಹಡೇನಹಳ್ಳಿ ಗ್ರಾಮ,
ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

2. ರವೀಶ,
ಬಿನ್ ರಂಗಪ್ಪ,
ಸುಮಾರು 58 ವರ್ಷ,
ವಾಸಃ ಮೇಗಲಕೇರಿ ಗ್ರಾಮ,
ಚನ್ನರಾಯಪಟ್ಟಣ ನಗರ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

3. ಚಂದ್ರಶೇಖರ ಡಿ.ಎನ್,
ಬಿನ್ ಲೇಟ್ ನಂಜೇಗೌಡ,
ಸುಮಾರು 44 ವರ್ಷ,
ವಾಸಃ ದಿಂಡಗೂರು ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

4. ಬೊರೇಗೌಡ ಎಂ.ಎನ್,
ಬಿನ್ ನಂಜುಂಡೇಗೌಡ,
ಸುಮಾರು 45 ವರ್ಷ,
ವಾಸಃ ನಂದಿಸಿ ಕಾಂಪ್ಲೆಕ್ಸ್,
ಬಿ.ಎಂ ರಸ್ತೆ, ಕೋರ್ಟ್ ಹತ್ತಿರ,
ಕೆ. ಮಲ್ಲೇನಹಳ್ಳಿ ಗ್ರಾಮ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

5. ಸತೀಶ ಸಿ.ಆರ್,
ಬಿನ್ ಲೆಟ್ ರಾಜಣ್ಣ,
ಸುಮಾರು 41 ವರ್ಷ,
ವಾಸಃ ಮಖಾನ್,
ಶ್ರವಣಬೆಳಗೊಳ ರಸ್ತೆ,
ಚನ್ನರಾಯಪಟ್ಟಣ ನಗರ,
ಹಾಸನ ಜಿಲ್ಲೆ.

6. ಲಕ್ಷ್ಮೀಗೌಡ,
ಬಿನ್ ಪುಟ್ಟೇಗೌಡ,
ಸುಮಾರು 50 ವರ್ಷ,
ವಾಸಃ ಗಾಯತ್ರಿ ಬಡಾವಣೆ,
ಚನ್ನರಾಯಪಟ್ಟಣ ನಗರ,
ಹಾಸನ ಜಿಲ್ಲೆ.

7. ದೇವರಾಜು ಜಿ.ಎನ್,
ಬಿನ್ ನಂಜಪ್ಪ ಜಿ.ಸಿ,

ಸುಮಾರು 60 ವರ್ಷ,
ವಾಸಃ ಗೌರಿಕೊಪ್ಪಲು ಗ್ರಾಮ, ಗುಲಸಿಂದ ದಾಖಲೆ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**(ಶ್ರೀ ಎಸ್.ಆರ್.ಎಸ್., ವಕೀಲರಿಂದ)**

| | | | |
|---|---|---|---|
| 1. | ಘಟನೆ ಸಂಭವಿಸಿದ ದಿನಾಂಕ | ಃ | 30.01.2020 |
| 2. | ಘಟನೆ ವರದಿಯಾದ ದಿನಾಂಕ | ಃ | 30.01.2020 |
| 3. | ಫಿರ್ಯಾದಿದಾರರ ಹೆಸರು | ಃ | ಶಂಶುದ್ದೀನ್ ಕೆ.ಪಿ |
| 4. | ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 16.08.2023 |
| 5. | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | ಃ | 25.04.2026 |
| 6. | ಆರೋಪಿಸಲಾದ ಅಪರಾಧಗಳು | ಃ | ಭಾ.ದಂ.ಸಂ. ಕಲಂ. 341, 353, 323, 504, 506 ಸಹವಾಚಕ ಕಲಂಃ 149 |
| 7. | ನ್ಯಾಯಾಧೀಶರ ಅಭಿಪ್ರಾಯ | ಃ | ಕೊನೆಯ ಆದೇಶದಂತೆ. |

## ತೀರ್ಪು

ಆರಕ್ಷಕ ಉಪನಿರೀಕ್ಷಕರು, ನಗರ ಪೊಲೀಸ್ ಠಾಣೆ, ಚನ್ನರಾಯಪಟ್ಟಣ, ಇವರು ಆರೋಪಿತರು **ಭಾ.ದಂ.ಸಂ. ಕಲಂಃ** 341, 353, 323, 504, 506 ಸಹವಾಚಕ ಕಲಂಃ 149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆ :-**

ದಿನಾಂಕ 30-01-2020 ರಂದು ಮಧ್ಯಾಹ್ನ 12-15 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣಾ ಸರಹದ್ದಿನ ಮಿನಿ ವಿಧಾನಸೌಧದಲ್ಲಿರುವ ಸರ್ವೆ ಕಛೇರಿಯಲ್ಲಿ, ಸಾಕ್ಷಿ-1 ರವರು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸಾಕ್ಷಿ-1 ರವರ ಕೊಠಡಿಗೆ ಬಂದ 1ರಿಂದ 7ನೇ ಸ ಆರೋಪಿತರು, ಸಾಕ್ಷಿ-1 ರವರನ್ನು ಕುರಿತು ಈ ಹಿಂದೆ 11ಇ ನಕ್ಷೆ (ರಿಜಿಸ್ಟ್ರೇಷನ್ ಪೂರ್ವ ನಕ್ಷೆ) ನೀಡುತ್ತಿದ್ದರು, ಈಗ ಯಾಕೆ ನೀಡುತ್ತಿಲ್ಲವೆಂದು ಕೂಗಾಡಿ ಸಾಕ್ಷಿ-1 ರವರಿಗೆ ಸೂಳೆ ಮಗನೆ, ಬೋಳಿ ಮಗನೆ ನಿಮ್ಮನ್ನು ಬೆಂಕಿ ಹಾಕಿ ಸುಟ್ಟು ಹಾಕುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಾಗ ಅಲ್ಲಿಗೆ ಬಂದ ಸಾಕ್ಷಿ-2

ಮತ್ತು 3 ರವರು 2ನೇ ಆರೋಪಿಯನ್ನು ಕಛೇರಿಯಿಂದ ಆಚೆಗೆ ಕರೆದುಕೊಂಡುಹೋದರೂ, ಕೇಳದೆ ವಾಪಸ್ ಬಂದು ಸಾಕ್ಷಿ-1 ರವರ ಜೊತೆ ಗಲಾಟೆ ಮಾಡಿದ್ದು, ಸಾಕ್ಷಿ-1 ರವರು ಈ ರೀತಿ ನೀವು ಗಲಾಟೆ ಮಾಡಿ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡಚಣೆ ಮಾಡಿದರೆ ನಾನು ಪೊಲೀಸರಿಗೆ ದೂರು ಕೊಡುತ್ತೇನೆಂದು ಕಛೇರಿಯಿಂದ ಕೆಳಗೆ ಇಳಿದು ಅವರ ಕಾರಿಗೆ ಹೋಗಿ ಕುಳಿತುಕೊಂಡಾಗ 1 ರಿಂದ 7 ನೇ ಆರೋಪಿತರು ಸಾಕ್ಷಿ-1 ರವರ ಕಾರನ್ನು ಸುತ್ತುವರೆದು ತಡೆದು, ಅಲ್ಲಿದ್ದ ಸಾಕ್ಷಿ-2 ಮತ್ತು 3 ರವರು ಸಾಕ್ಷಿ-1 ರವರ ಕಾರಿಗೆ ದಾರಿ ಬಿಡಿಸಲು ಹೋದಾಗ 1, 2 ಮತ್ತು 3ನೇ ಆರೋಪಿತರು ಸಾಕ್ಷಿ-2 ರವರನ್ನು ತಳ್ಳಾಡಿ ಕೈಗಳಿಂದ ಮೈಕೈಗೆ ಹೊಡೆದಿದ್ದು, ಉಳಿದ ಆರೋಪಿತರು ಸಾಕ್ಷಿ-2 ರವರಿಗೆ ಬಾಯಿಗೆ ಬಂದಂತೆ ಬೈಯ್ದು ಗಲಾಟೆ ಮಾಡಿದ್ದು, ನಂತರ ಸಾಕ್ಷಿ-2 ರವರು ಕಛೇರಿಗೆ ವಾಪಸ್ಸು ಹೋಗಲು ಮೆಟ್ಟಿಲುಗಳನ್ನು ಹತ್ತುವಾಗಲು ಸಹ 1 ಮತ್ತು 2 ನೇ ಆರೋಪಿತರು ಕೈಗಳಿಂದ ಸಾಕ್ಷಿ-2 ರವರ ಮೈಕೈಗೆ ಹೊಡೆದು ಎಳೆದಾಡಿ, ಸಾಕ್ಷಿ-1 ಮತ್ತು ಸಾಕ್ಷಿ-2 ರವರು ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಬೈಯ್ದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸದರಿ ಆರೋಪಿತರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರನ್ನು ಆಧರಿಸಿ ಆರೋಪಿತರ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ ನಂತರ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

**3.** ಆರೋಪಿತರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂಃ 207ರ ಪ್ರಕಾರ ಅಭಿಯೋಜನೆಯ ಪ್ರಕರಣದ ಪ್ರತಿಗಳನ್ನು ಆರೋಪಿತರಿಗೆ ಪೂರೈಸಲಾಯಿತು. ವಾದವನ್ನು ಕೇಳಿದ ನಂತರ ಆರೋಪಿತರನ್ನು ಈ ಪ್ರಕರಣದಿಂದ ಕೈ ಬಿಡಲು ಯಾವುದೇ ಸಕಾರಣಗಳು ಇಲ್ಲದಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ, ಓದಿ ಹೇಳಿದ್ದು, ಆರೋಪಿತರು ದೋಷಾರೋಪಣೆಯನ್ನು ಅಲ್ಲಗಳೆದು ತಪ್ಪು ಮಾಡಿಲ್ಲ, ಪ್ರಕರಣ ವಿಚಾರಣೆ ಆಗಬೇಕೆಂದು ಕೇಳಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರಿಗೆ ತಮ್ಮ ಸಾಕ್ಷ್ಯ ನೀಡಲು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡಲಾಯಿತು. ಅಭಿಯೋಜನೆಯು ಚಾಸಾ. 1 ರಿಂದ 8, 10, 11, 9, 12, 14, 15 ಮತ್ತು 17 ರವರನ್ನು ಪ್ರಾಸಾ.1 ರಿಂದ ಪ್ರಾಸಾ.15 ಎಂದು ವಿಚಾರಣೆಗೊಳಪಡಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ದಾಖಲೆಗಳನ್ನು ನಿಪಿ.1 ರಿಂದ ನಿಪಿ.16 ಎಂದು ಗುರುತಿಸಿಕೊಂಡಿರುತ್ತಾರೆ ಮತ್ತು ಮುದ್ದೇಮಾಲನ್ನು ಮು.ಮಾ.1 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂಃ 313ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

**4.** ಅಭಿಯೋಜನೆಯ ಪರ ಹಾಗೂ ಆರೋಪಿತರ ಪರ ವಕೀಲರ ವಾದಗಳನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಲಾಯಿತು.

**5.** ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ :1** ಃ ದಿನಾಂಕ 30-01-2020 ರಂದು ಮಧ್ಯಾಹ್ನ 12-15 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣಾ ಸರಹದ್ದಿನ ಮಿನಿ ವಿಧಾನಸೌಧದಲ್ಲಿರುವ ಸರ್ವೆ ಕಛೇರಿಯಲ್ಲಿ, ಸಾಕ್ಷಿ-1 ರವರು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸಾಕ್ಷಿ-1 ರವರ ಕೊಠಡಿಗೆ ಬಂದ 1ರಿಂದ 7ನೇ ಸ ಆರೋಪಿತರು, ಸಾಕ್ಷಿ-1 ರವರನ್ನು ಕುರಿತು ಈ ಹಿಂದೆ 11ಇ ನಕ್ಷೆ (ರಿಜಿಸ್ಟ್ರೇಷನ್ ಪೂರ್ವ ನಕ್ಷೆ) ನೀಡುತ್ತಿದ್ದರು, ಈಗ ಯಾಕೆ ನೀಡುತ್ತಿಲ್ಲವೆಂದು ಕೂಗಾಡಿ ಸಾಕ್ಷಿ-1 ರವರಿಗೆ ಸೂಳೆ ಮಗನೆ, ಬೋಳಿ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡುವುದಕ್ಕಾಗಿ ಉದ್ದೇಶ ಪೂರ್ವಕವಾಗಿ ಉದ್ರೇಕಿಸಿ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಆರೋಪಿತರು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ ?

**ಅಂಶ :2** ಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ನಿಮ್ಮನ್ನು ಬೆಂಕಿ ಹಾಕಿ ಸುಟ್ಟು ಹಾಕುತ್ತೇನೆ ಎಂದು ಸಾಕ್ಷಿ.1 ರವರಿಗೆ ಬೆದರಿಕೆ ಹಾಕುತ್ತಿದ್ದಾಗ ಅಲ್ಲಿಗೆ ಬಂದ ಸಾಕ್ಷಿ-2 ಮತ್ತು 3 ರವರು 2ನೇ ಆರೋಪಿಯನ್ನು ಕಛೇರಿಯಿಂದ ಆಚೆಗೆ ಕರೆದುಕೊಂಡುಹೋದರೂ, ಕೇಳದೆ ವಾಪಸ್ ಬಂದು ಸಾಕ್ಷಿ-1 ರವರ ಜೊತೆ ಗಲಾಟೆ ಮಾಡಿದ್ದು, ಸಾಕ್ಷಿ-1 ರವರು ಈ ರೀತಿ ನೀವು ಗಲಾಟೆ ಮಾಡಿ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡಚಣೆ ಮಾಡಿದರೆ ನಾನು ಪೊಲೀಸರಿಗೆ ದೂರು ಕೊಡುತ್ತೇನೆಂದು ಕಛೇರಿಯಿಂದ ಕೆಳಗೆ ಇಳಿದು ಅವರ ಕಾರಿಗೆ ಹೋಗಿ ಕುಳಿತುಕೊಂಡಾಗ

1 ರಿಂದ 7 ನೇ ಆರೋಪಿತರು ಸಾಕ್ಷಿ-1 ರವರ ಕಾರನ್ನು ಸುತ್ತುವರೆದು ಮುಂದಕ್ಕೆ ಹೋಗದಂತೆ ಅಕ್ರಮಾಗಿ ತಡೆದು, ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂಃ 341 ಸಹವಾಚಕ ಕಲಂ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಆರೋಪಿತರು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ ?

**ಅಂಶ :3** ಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ-2 ಮತ್ತು 3 ರವರು ಸಾಕ್ಷಿ-1 ರವರ ಕಾರಿಗೆ ದಾರಿ ಬಿಡಿಸಲು ಹೋದಾಗ 1, 2 ಮತ್ತು 3ನೇ ಆರೋಪಿತರು ಸಾಕ್ಷಿ-2 ರವರನ್ನು ತಳ್ಳಾಡಿ ಕೈಗಳಿಂದ ಮೈಕೈಗೆ ಹೊಡೆದಿದ್ದು, ಉಳಿದ ಆರೋಪಿತರು ಸಾಕ್ಷಿ-2 ರವರಿಗೆ ಬಾಯಿಗೆ ಬಂದಂತೆ ಬೈಯ್ದು ಗಲಾಟೆ ಮಾಡಿದ್ದು, ನಂತರ ಸಾಕ್ಷಿ-2 ರವರು ಕಛೇರಿಗೆ ವಾಪಸ್ಸು ಹೋಗಲು ಮೆಟ್ಟಿಲುಗಳನ್ನು ಹತ್ತುವಾಗಲು ಸಹ 1 ಮತ್ತು 2 ನೇ ಆರೋಪಿತರು ಕೈಗಳಿಂದ ಸಾಕ್ಷಿ-2 ರವರ ಮೈಕೈಗೆ ಹೊಡೆದು ಎಳೆದಾಡಿ ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಆರೋಪಿತರು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

**ಅಂಶ :4** ಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಚಾಸಾ.1 ರವರ ಜೊತೆ ಜಗಳ ತೆಗೆದು ಚಾಸಾ.2 ಮತ್ತು 3 ರವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಆರೋಪಿತರು ಎಸಗಿದ್ದಾರೆಂದು

ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

**ಅಂಶ :5** ಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಚಾಸಾ.1 ರವರ ಜೊತೆ ಜಗಳ ತೆಗೆದು ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿ ಚಾಸಾ.1 ಮತ್ತು 2 ರವರನ್ನು ಕೊಲೆ ಮಾಡುವುದಾಗಿ ಹೇದರಿಸಿ, ಪ್ರಾಣ ಬೆದರಿಕೆ ಹಾಕಿ ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಆರೋಪಿತರು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

**ಅಂಶ – 6** ಃ ಯಾವ ಆದೇಶ ?

**6.** ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

ಅಂಶ 1 ರಿಂದ 5 ಃ **ನಕಾರಾತ್ಮಕವಾಗಿ**
ಅಂಶ 6 ಃ ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ,

## : : ಕಾರಣಗಳು : :

**7.** **ಅಂಶ ಸಂಖ್ಯೆ – 1 ರಿಂದ 5** ಃ ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**8.** ಆರೋಪಿತರ ವಿರುದ್ಧ ಮಾಡಲಾಗಿರುವ ಆರೋಪವನ್ನು ರುಜುವಾತುಪಡಿಸುವ ಹೊಣೆಯು ಅಭಿಯೋಜನೆಯ ಮೇಲಿದ್ದು, ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ಧಿಷ್ಟ ಆರೋಪವೇನೆಂದರೆ, ದಿನಾಂಕ 30-01-2020 ರಂದು ಮಧ್ಯಾಹ್ನ 12-15 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣಾ ಸರಹದ್ದಿನ ಮಿನಿ ವಿಧಾನಸೌಧದಲ್ಲಿರುವ ಸರ್ವೆ ಕಛೇರಿಯಲ್ಲಿ, ಸಾಕ್ಷಿ-1 ರವರು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸಾಕ್ಷಿ-1 ರವರ ಕೊಠಡಿಗೆ ಬಂದ 1ರಿಂದ 7ನೇ ಸ ಆರೋಪಿತರು, ಸಾಕ್ಷಿ-1 ರವರನ್ನು ಕುರಿತು ಈ ಹಿಂದೆ 11ಇ ನಕ್ಷೆ (ರಿಜಿಸ್ಟ್ರೇಷನ್

ಪೂರ್ವ ನಕ್ಷೆ) ನೀಡುತ್ತಿದ್ದರು, ಈಗ ಯಾಕೆ ನೀಡುತ್ತಿಲ್ಲವೆಂದು ಕೂಗಾಡಿ ಸಾಕ್ಷಿ-1 ರವರಿಗೆ ಸೂಳೆ ಮಗನೆ, ಬೋಳಿ ಮಗನೆ ನಿಮ್ಮನ್ನು ಬೆಂಕಿ ಹಾಕಿ ಸುಟ್ಟು ಹಾಕುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಾಗ ಅಲ್ಲಿಗೆ ಬಂದ ಸಾಕ್ಷಿ-2 ಮತ್ತು 3 ರವರು 2ನೇ ಆರೋಪಿಯನ್ನು ಕಛೇರಿಯಿಂದ ಆಚೆಗೆ ಕರೆದುಕೊಂಡುಹೋದರೂ, ಕೇಳದೆ ವಾಪಸ್ ಬಂದು ಸಾಕ್ಷಿ-1 ರವರ ಜೊತೆ ಗಲಾಟೆ ಮಾಡಿದ್ದು, ಸಾಕ್ಷಿ-1 ರವರು ಈ ರೀತಿ ನೀವು ಗಲಾಟೆ ಮಾಡಿ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡಚಣೆ ಮಾಡಿದರೆ ನಾನು ಪೊಲೀಸರಿಗೆ ದೂರು ಕೊಡುತ್ತೇನೆಂದು ಕಛೇರಿಯಿಂದ ಕೆಳಗೆ ಇಳಿದು ಅವರ ಕಾರಿಗೆ ಹೋಗಿ ಕುಳಿತುಕೊಂಡಾಗ 1 ರಿಂದ 7 ನೇ ಆರೋಪಿತರು ಸಾಕ್ಷಿ-1 ರವರ ಕಾರನ್ನು ಸುತ್ತುವರೆದು ತಡೆದು, ಅಲ್ಲಿದ್ದ ಸಾಕ್ಷಿ-2 ಮತ್ತು 3 ರವರು ಸಾಕ್ಷಿ-1 ರವರ ಕಾರಿಗೆ ದಾರಿ ಬಿಡಿಸಲು ಹೋದಾಗ 1, 2 ಮತ್ತು 3ನೇ ಆರೋಪಿತರು ಸಾಕ್ಷಿ-2 ರವರನ್ನು ತಳ್ಳಾಡಿ ಕೈಗಳಿಂದ ಮೈಕೈಗೆ ಹೊಡೆದಿದ್ದು, ಉಳಿದ ಆರೋಪಿತರು ಸಾಕ್ಷಿ-2 ರವರಿಗೆ ಬಾಯಿಗೆ ಬಂದಂತೆ ಬೈಯ್ದು ಗಲಾಟೆ ಮಾಡಿದ್ದು, ನಂತರ ಸಾಕ್ಷಿ-2 ರವರು ಕಛೇರಿಗೆ ವಾಪಸ್ಸು ಹೋಗಲು ಮೆಟ್ಟಿಲುಗಳನ್ನು ಹತ್ತುವಾಗಲು ಸಹ 1 ಮತ್ತು 2 ನೇ ಆರೋಪಿತರು ಕೈಗಳಿಂದ ಸಾಕ್ಷಿ-2 ರವರ ಮೈಕೈಗೆ ಹೊಡೆದು ಎಳೆದಾಡಿ, ಸಾಕ್ಷಿ-1 ಮತ್ತು ಸಾಕ್ಷಿ-2 ರವರು ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಬೈಯ್ದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿ ಇರುತ್ತದೆ.

**9.** ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪವನ್ನು ಸಾಬೀತುಪಡಿಸುವುದಕ್ಕಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.1 ರವರು ಪಿರ್ಯಾದುದಾರರು ಹಾಗೂ ಮಹಜರ್ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 30-01-2020 ರಂದು ಬೆಳಿಗ್ಗೆ ಸುಮಾರು 10 ರಿಂದ 11 ಗಂಟೆಯ ಸಮಯದಲ್ಲಿ ತಾಮ್ಮ ಕಛೇರಿಯ ತನ್ನ ಕೊಠಡಿಯಲ್ಲಿದ್ದಾಗ ಪಕ್ಕದ ಕೊಠಡಿಯಲ್ಲಿ ಗಲಾಟೆ ಶಬ್ದ ಕೇಳಿಸಿದ್ದು ಆಗ ತಾನು ತಮ್ಮ ಸಿಬ್ಬಂದಿಯನ್ನು ಗಲಾಟೆ ಬಗ್ಗೆ ವಿಚಾರ ಮಾಡಲಾಗಿ, ಬಡಾವಣೆಗಳಿಗೆ 11-ಇ ಸ್ಕೆಚ್ ಗಳನ್ನು ಕೊಡುತ್ತಿಲ್ಲ ಎಂದು ಹೇಳಿ ಗಲಾಟೆ ಮಾಡುತ್ತಿದ್ದಾರೆ ಎಂದು ಗೊತ್ತಾಗಿರುತ್ತದೆ, ನಂತರ ತಾನು ಹೋಗಿ ನೋಡಲಾಗಿ ಸುಮಾರು 30 ರಿಂದ 40 ಜನ ಸೇರಿಕೊಂಡು ಕೂಗಾಡುತ್ತಾ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು, ನಂತರ ತಾನು ಕೆಳಕ್ಕೆ ಬಂದು ತನ್ನ ಖಾಸಗಿ ವಾಹನದಲ್ಲಿ ಕುಳಿತುಕೊಂಡಾಗ ಆಗ ಅಲ್ಲಿಯೇ ಇದ್ದ ಸುಮಾರು 100 ರಿಂದ 150 ಜನರು ತನ್ನ ವಾಹನವನ್ನು ಸುತ್ತುವರೆದು, ವಾಹನಕ್ಕೆ ಕೈನಿಂದ ಹೊಡೆಯುತ್ತಿದ್ದು, ಆಗ ತಾನು ಪೋಲೀಸರಿಗೆ ದೂರವಾಣಿ ಕರೆ ಮಾಡಿ ಹೇಳಿರುತ್ತೇನೆ, ಮೊದಲು ತಾನು ವಾಹನದ ಒಳಗೆ ಕೂರಲು ಹೋಗುತ್ತಿದ್ದಾಗ ತನ್ನನ್ನು ತಳ್ಳಾಡಿ, ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು, ಆ ದಿನ ತುಂಬಾ ಜನರಿದ್ದ ಕಾರಣ ಆರೋಪಿಗಳನ್ನು ಗುರುತಿಸಲು

ಸಾಧ್ಯವಾಗುತ್ತಿಲ್ಲ ಎಂದು ನ್ಯಾಯಾಲಯದಲ್ಲಿ ನುಡಿಯುತ್ತಾರೆ, ನಂತರ ನಿಪಿ-2 ಮಹಜರಿಗೆ ಸಹಿಯನ್ನು ಗಲಾಟೆಯಾದ ಮಾರನೆ ದಿನ ಪೋಲೀಸರು ಮಹಜರ್ ಮಾಡಲು ಬಂದಾಗ ತಾನು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಮಹಜರ್ ಬರೆದು ತನ್ನ ಸಹಿ ಪಡೆದಿರುತ್ತಾರೆ, ಸದರಿ ಮಹಜರ್ ಗೆ ತನ್ನ ಜೊತೆ ಚಾಸ-10 ರವರು ಸಹಿ ಮಾಡಿರುತ್ತಾರೆ, ನಂತರ ಅಮಾನತ್ತು ಮಹಜರ್ ಗೆ ಸಹಿಯನ್ನು ಪೋಲೀಸರು ಘಟನಾ ಸ್ಥಳಕ್ಕೆ ಬಂದಾಗ ಮಾಡಿರುತ್ತೇನೆ, ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ, ಸದರಿ ದಾಖಲೆಗೆ ತನ್ನ ಜೊತೆ ತನ್ನ ಸಿಬ್ಬಂದಿಗಳು ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**10.** ಪ್ರಾಸಾ.1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೇ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿಯು ಆರೋಪಿತರ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಆ ದಿನ ಸುಮಾರು 100-150 ಜನ ಹಾಜರಿದ್ದ ಕಾರಣ ಆರೋಪಿತರನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿದಿದ್ದು, ಅದೇ ರೀತಿ ಅವಾಚ್ಯ ಶಬ್ದಗಳಿಂದ ಯಾರು ಬೈದಿರುತ್ತಾರೆ ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಹಾಗೂ ಯಾರು ತನ್ನನ್ನು ತಳ್ಳಿರುತ್ತಾರೆ ಎಂದು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ ಎಂದು ಒಪ್ಪಿರುತ್ತಾರೆ. ಅದೇ ರೀತಿ ಚಾಸಾ.2 ರವರಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**11.** ಚಾಸಾ.2 ರವರನ್ನು ಪ್ರಾಸಾ.2 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿದರರಾಗಿದ್ದು, ತನ್ನ ಸಾಕ್ಷ್ಯದಲ್ಲಿ, ದಿಃ 30-01-2020 ರಂದು ಬೆಳಿಗ್ಗೆ ಸುಮಾರು 12 ರಿಂದ 12.15 ಗಂಟೆಯ ಸಮಯದಲ್ಲಿ ತಾನು ಕಛೇರಿಯ ಕೆಲಸ ಮಾಡುತ್ತಿದ್ದಾಗ, ಚಾಸ-1 ರವರ ಕೊಠಡಿಯಲ್ಲಿ ಗಲಾಟೆ ಶಬ್ದ ಕೇಳಿಸಿದ್ದು, ಆಗ ತಾನು ಹೋಗಿ ನೋಡಲಾಗಿ, ಸುಮಾರು 15 ಜನರು ಚಾಸ-1 ರವರ ಜೊತೆ 11-ಇ ಸ್ಕೆಚ್ ಗಳನ್ನು ತಯಾರಿಸುವ ಬಗ್ಗೆ ಕೂಗಾಡುತ್ತಿದ್ದರು. ಅದಕ್ಕೆ ಚಾಸ-1 ರವರು 1 ರಿಂದ 5 ಗುಂಟೆವರೆಗಿನ ಸ್ವತ್ತುಗಳ ವ್ಯವಸಾಯೇತರ ಸಂಬಂಧ 11-ಇ ಸ್ಕೆಚ್ ಗಳನ್ನು ಮಾಡಲು ತನಗೆ ಅಧಿಕಾರ ಇರುವುದಿಲ್ಲ ಎಂದು ತಿಳಿಸಿರುತ್ತಾರೆ, ಅಲ್ಲಿದ್ದ ವ್ಯಕ್ತಿಗಳು ಮೊದಲು ನೀಡುತ್ತಿದ್ದು, ಈಗ ಏಕೆ ಕೊಡುತ್ತಿಲ್ಲ ಎಂದು ಕೂಗಾಡುತ್ತಿದ್ದರು, ಆನಂತರ ಚಾಸ-1 ರವರು ಠಾಣೆಗೆ ದೂರು ನೀಡಲು ಕಛೇರಿಯಿಂದ ಹೊರಟು ಕಾರಿನಲ್ಲಿ ಕುಳಿತುಕೊಂಡಾಗ ಆಗ ಅಲ್ಲಿಯೇ

ಇದ್ದ ಸುಮಾರು 100 ರಿಂದ 150 ಜನರು ಅವರ ವಾಹನವನ್ನು ಸುತ್ತುವರೆದು, ಗಲಾಟೆ ಮಾಡುತ್ತಿದ್ದು, ಅವರನ್ನು ಹೋಗಲು ಬಿಡುತ್ತಿರಲಿಲ್ಲ, ತಾವು ಜನಗಳನ್ನು ಬಿಡಿಸಲು ಹೋದಾಗ ಅವರು ತಳ್ಳಾಡುತ್ತಿದ್ದರು, ನಂತರ ಪೊಲೀಸರು ಸ್ಥಳಕ್ಕೆ ಬಂದು ಚಾಸಾ.1 ರವರನ್ನು ತಹಸಿಲ್ದಾರ್ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ.2 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.2 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೆ, ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**12.** ಚಾಸಾ.3 ರವರನ್ನು ಪ್ರಾಸಾ.3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತನ್ನ ಸಾಕ್ಷ್ಯದಲ್ಲಿ, ದಿಃ 30-01-2020 ರಂದು ಬೆಳಿಗ್ಗೆ ಸುಮಾರು 12 ರಿಂದ 12.30 ಗಂಟೆಯ ಸಮಯದಲ್ಲಿ ತಾನು ಕಛೇರಿಯ ಕೆಲಸ ಮಾಡುತ್ತಿದ್ದಾಗ, ಚಾಸ-1 ರವರ ಕೊಠಡಿಯಲ್ಲಿ ಗಲಾಟೆ ಶಬ್ದ ಕೇಳಿಸಿದ್ದು, ಆಗ ತಾನು ಹೋಗಿ ನೋಡಲಾಗಿ, ಸುಮಾರು 20 ರಿಂದ 25 ಜನರು ಚಾಸ-1 ರವರ ಜೊತೆ 11-ಇ ಸ್ಕೆಚ್ ಗಳನ್ನು ತಯಾರಿಸುವ ಬಗ್ಗೆ ಕೂಗಾಡುತ್ತಿದ್ದರು, ಅದಕ್ಕೆ ಚಾಸ-1 ರವರು 1 ರಿಂದ 5 ಗುಂಟೆವರೆಗಿನ ಸ್ವತ್ತುಗಳ ವ್ಯವಸಾಯೇತರ ಸಂಬಂಧ 11-ಇ ಸ್ಕೆಚ್ ಗಳನ್ನು ಮಾಡಲು ನನಗೆ ಅಧಿಕಾರ ಇರುವುದಿಲ್ಲ ಎಂದು ತಿಳಿಸಿರುತ್ತಾರೆ, ಅಲ್ಲಿದ್ದ ವ್ಯಕ್ತಿಗಳು ಮೊದಲು ನೀಡುತ್ತಿದ್ದು, ಈಗ ಏಕೆ ಕೊಡುತ್ತಿಲ್ಲ ಎಂದು ಕೂಗಾಡುತ್ತಿದ್ದರು. ಆನಂತರ ಚಾಸ-1 ರವರು ಠಾಣೆಗೆ ದೂರು ನೀಡಲು ಕಛೇರಿಯಿಂದ ಹೊರಟು ಕಾರಿನಲ್ಲಿ ಕುಳಿತುಕೊಂಡಾಗ ಆಗ ಅಲ್ಲಿಯೇ ಇದ್ದ ಸುಮಾರು 50 ರಿಂದ 60 ಜನರು ಅವರ ವಾಹನವನ್ನು ಸುತ್ತುವರೆದು, ಗಲಾಟೆ ಮಾಡುತ್ತಿದ್ದು, ಅವರನ್ನು ಹೋಗಲು ಬಿಡುತ್ತಿರಲಿಲ್ಲ. ತಾವು ಜನಗಳನ್ನು ಬಿಡಿಸಲು ಹೋದಾಗ ಅವರು ತಳ್ಳಾಡುತ್ತಿದ್ದರು. ನಂತರ ಪೋಲೀಸರು ಸ್ಥಳಕ್ಕೆ ಬಂದು ಚಾಸ-1 ರವರನ್ನು ತಹಸಿಲ್ದಾರ್ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರಾಸಾ.3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೆ, ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**13.** ಚಾಸಾ.4 ರವರನ್ನು ಪ್ರಾಸಾ.4 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.4 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 30-01-2020 ರಂದು ಬೆಳಿಗ್ಗೆ ಸುಮಾರು 12.15 ಗಂಟೆಯ ಸಮಯದಲ್ಲಿ ತಾನು ಕಛೇರಿಯ ಕೆಲಸ ಮಾಡುತ್ತಿದ್ದಾಗ, ಚಾಸ-1 ರವರ ಕೊಠಡಿಯಲ್ಲಿ ಗಲಾಟೆ ಶಬ್ದ ಕೇಳಿಸಿದ್ದು, ಆಗ ತಾನು ಹೋಗಿ ನೋಡಲಾಗಿ, ಸುಮಾರು 7 ರಿಂದ 8ಜನರು ಚಾಸ-1 ರವರ ಜೊತೆ 11-ಇ ಸ್ಕೆಚ್

ಗಳನ್ನು ತಯಾರಿಸುವ ಬಗ್ಗೆ ಕೂಗಾಡುತ್ತಿದ್ದರು. ಆಗ ಚಾಸಾ 1 ರವರು ತನ್ನ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದೀರಾ ಎಂದು ಪೋಲೀಸ್ ಠಾಣೆಗೆ ದೂರು ನೀಡಲು ಕೊಠಡಿಯಿಂದ ಕೆಳಗೆ ಹೋಗಿರುತ್ತಾರೆ. ಅವರ ಜೊತೆ ಚಾಸಾ 2, 3 ರವರು ಸಹ ಹೋಗಿರುತ್ತಾರೆ, ಆಗ ಚಾಸಾ-1 ರವರ ಕಾರಿನ ಬಳಿ ಸುಮಾರು 100 ರಿಂದ 150 ಜನ ಸೇರಿಕೊಂಡು ಗಲಾಟೆ ಮಾಡುತ್ತಿದ್ದರು. ನಂತರ ಪೋಲೀಸರು ಅಲ್ಲಿಗೆ ಬಂದು ಚಾಸಾ-1 ರವರನ್ನು ವಾಪಸ್ ಕಚೇರಿಗೆ ಕರೆದುಕೊಂಡು ಬಂದಿರುತ್ತಾರೆ, ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ, ಆ ದಿನ ಜನ ಹೆಚ್ಚು ಸೇರಿದ್ದರಿಂದ ಗಲಾಟೆ ಮಾಡಿದ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಪ್ರಾಸಾ.4 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.4 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೆ, ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿಯು ಆರೋಪಿತರ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಆ ದಿನ 300-400 ಸಾರ್ವಜನಿಕರು ಸೇರಿದ್ದರು, ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ಹಾಗೆಯೇ ಚಾಸಾ.3 ರವರನ್ನು ಯಾರು ಎಳೆದಾಡಿರುತ್ತಾರೆ ಎಂದು ನೋಡಿಲ್ಲ ಎಂದು ನುಡಿದಿದ್ದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**15.** ಚಾಸಾ.5 ರವರನ್ನು ಪ್ರಾಸಾ.5 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.5 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಸಾಕ್ಷ್ಯದಲ್ಲಿ, ದಿಃ 30-01-2020 ರಂದು ಬೆಳಿಗ್ಗೆ ಸುಮಾರು 12.15 ಗಂಟೆಯ ಸಮಯದಲ್ಲಿ ತಾನು ಕಛೇರಿಯ ಕೆಲಸ ಮಾಡುತ್ತಿದ್ದಾಗ, ಚಾಸ-1 ರವರ ಕೊಠಡಿಯಲ್ಲಿ ಗಲಾಟೆ ಶಬ್ದ ಕೇಳಿಸಿದ್ದು, ಆಗ ತಾನು ಹೋಗಿ ನೋಡಲಾಗಿ, ಸುಮಾರು 6 ರಿಂದ 7ಜನರು ಚಾಸ-1 ರವರ ಜೊತೆ 11-ಇ ಸ್ಕೆಚ್ ಗಳನ್ನು ತಯಾರಿಸುವ ಬಗ್ಗೆ ಕೂಗಾಡುತ್ತಿದ್ದರು. ಆಗ ಚಾಸಾ 1 ರವರು ನನ್ನ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದೀರಾ ಎಂದು ಪೋಲೀಸ್ ಠಾಣೆಗೆ ದೂರು ನೀಡಲು ಕೊಠಡಿಯಿಂದ ಕೆಳಗೆ ಹೋಗಿರುತ್ತಾರೆ, ಅವರ ಜೊತೆ ಚಾಸಾ 2, 3 ರವರು ಸಹ ಹೋಗಿರುತ್ತಾರೆ, ಆಗ ಚಾಸಾ 1 ರವರ ಕಾರಿನ ಬಳಿ ಸುಮಾರು 100 ರಿಂದ 150 ಜನ ಸೇರಿಕೊಂಡು ಗಲಾಟೆ ಮಾಡುತ್ತಿದ್ದರು, ನಂತರ ಪೋಲೀಸರು ಅಲ್ಲಿಗೆ ಬಂದು ಚಾಸಾ 1 ರವರನ್ನು ವಾಪಸ್ ಕಚೇರಿಗೆ ಕರೆದುಕೊಂಡು ಬಂದಿರುತ್ತಾರೆ, ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ, ಆ ದಿನ ಜನ ಹೆಚ್ಚು ಸೇರಿದ್ದರಿಂದ ಗಲಾಟೆ ಮಾಡಿದ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**16.** ಪ್ರಾಸಾ.5 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.5 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೇ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿಯು ಆರೋಪಿತರ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಆ ದಿನ 300-400 ಸಾರ್ವಜನಿಕರು ಸೇರಿದ್ದರು, ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ಹಾಗೆಯೇ ಚಾಸಾ.3 ರವರನ್ನು ಯಾರು ಎಳೆದಾಡಿರುತ್ತಾರೆ ಎಂದು ನೋಡಿಲ್ಲ ಎಂದು ನುಡಿದಿದ್ದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**17.** ಚಾಸಾ.6 ರವರನ್ನು ಪ್ರಾಸಾ.6 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.6 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಸಾಕ್ಷ್ಯದಲ್ಲಿ, ದಿಃ 30-01-2020 ರಂದು ಬೆಳಿಗ್ಗೆ ಸುಮಾರು 12.15 ಗಂಟೆಯ ಸಮಯದಲ್ಲಿ ತಾನು ಕಛೇರಿಯ ಕೆಲಸ ಮಾಡುತ್ತಿದ್ದಾಗ, ಚಾಸ-1 ರವರ ಕೊಠಡಿಯಲ್ಲಿ ಗಲಾಟೆ ಶಬ್ದ ಕೇಳಿಸಿದ್ದು, ಆಗ ತಾನು ಹೋಗಿ ನೋಡಲಾಗಿ, ಸುಮಾರು 7 ರಿಂದ 8 ಜನರು ಚಾಸ-1 ರವರ ಜೊತೆ 11-ಇ ಸ್ಕೆಚ್ ಗಳನ್ನು ತಯಾರಿಸುವ ಬಗ್ಗೆ ಕೂಗಾಡುತ್ತಿದ್ದರು. ಆಗ ಚಾಸಾ 1 ರವರು ತನ್ನ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದೀರಾ ಎಂದು ಪೋಲೀಸ್ ಠಾಣೆಗೆ ದೂರು ನೀಡಲು ಕೊಠಡಿಯಿಂದ ಕೆಳಗೆ ಹೋಗಿರುತ್ತಾರೆ, ಅವರ ಜೊತೆ ಚಾಸಾ 2, 3 ರವರು ಸಹ ಹೋಗಿರುತ್ತಾರೆ, ಆಗ ಚಾಸಾ-1 ರವರ ಕಾರಿನ ಬಳಿ ಸುಮಾರು 100 ರಿಂದ 150 ಜನ ಸೇರಿಕೊಂಡು ಗಲಾಟೆ ಮಾಡುತ್ತಿದ್ದರು, ನಂತರ ಪೋಲೀಸರು ಅಲ್ಲಿಗೆ ಬಂದು ಚಾಸಾ-1 ರವರನ್ನು ವಾಪಸ್ ಕಚೇರಿಗೆ ಕರೆದುಕೊಂಡು ಬಂದಿರುತ್ತಾರೆ, ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ, ಆ ದಿನ ಜನ ಹೆಚ್ಚು ಸೇರಿದ್ದರಿಂದ ಗಲಾಟೆ ಮಾಡಿದ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**18.** ಪ್ರಾಸಾ.6 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.6 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೇ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿಯು ಆರೋಪಿತರ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಆ ದಿನ 300-400 ಸಾರ್ವಜನಿಕರು ಸೇರಿದ್ದರು, ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ಹಾಗೆಯೇ ಚಾಸಾ.3 ರವರನ್ನು ಯಾರು ಎಳೆದಾಡಿರುತ್ತಾರೆ ಎಂದು

ನೋಡಿಲ್ಲ ಎಂದು ನುಡಿದಿದ್ದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**19.** ಚಾಸಾ.7 ರವರನ್ನು ಪ್ರಾಸಾ.7 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.7 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಸಾಕ್ಷ್ಯದಲ್ಲಿ, ದಿನಾಂಕ 30.01.2020ರಂದು ಚನ್ನರಾಯಪಟ್ಟಣ ತಾಲ್ಲೂಕು ಕಛೇರಿಯ ಸರ್ವೆ ಕಛೇರಿಯಲ್ಲಿ ಚಾಸಾ-1 ಮತ್ತು ಸಾರ್ವಜನಿಕರ ನಡುವೆ ಗಲಾಟೆಯಾಗುತ್ತಿತ್ತು, ನಂತರ ತಾನು ಹೋಗುವಷ್ಟರಲ್ಲಿ ಚಾಸಾ-1ರವರು ಕಳಗಡೆ ಇಳಿದುಹೋಗಿರುತ್ತಾರ,. ಆನಂತರ ಏನಾಗಿರುತ್ತದೆ ಎಂದು ತನಗೆ ಗೊತ್ತಿಲ್ಲ, ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**20.** ಪ್ರಾಸಾ.7 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.7 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ.7 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಪೊಲೀಸರು ಬರೆದುಕೊಂಡ ಹೇಳಿಕೆಗೆ ತಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**21.** ಚಾಸಾ.8 ರವರನ್ನು ಪ್ರಾಸಾ.8 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.8 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಸಾಕ್ಷ್ಯದಲ್ಲಿ, ದಿನಾಂಕ 30.01.2020ರಂದು ಚನ್ನರಾಯಪಟ್ಟಣ ತಾಲ್ಲೂಕು ಕಛೇರಿಯ ಚಾಸಾ-1ರವರ ಕೊಠಡಿಯ ಬಳಿ ಮಧ್ಯಾಹ್ನ 12.30 – 01.00 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಸಾರ್ವಜನಿಕರ ನಡುವೆ ಗಲಾಟೆಯಾಗುತ್ತಿತ್ತು, ನಂತರ ತಾನು ಹೋಗುವಷ್ಟರಲ್ಲಿ ಚಾಸಾ-1ರವರು ಕಳಗಡೆ ಇಳಿದುಹೋಗಿರುತ್ತಾರೆ, ನಂತರ ಕೆಳಗೆ ಹೋಗಿ ನೋಡಲಾಗಿ ಅಲ್ಲಿ 100 – 150 ಜನ ಸೇರಿಕೊಂಡಿದ್ದರು, ಆನಂತರ ಏನಾಗಿರುತ್ತದೆ ಎಂದು ತನಗೆ ಗೊತ್ತಿಲ್ಲ, ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**22.** ಪ್ರಾಸಾ.8 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.8 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ.8 ರವರನ್ನು ಪಾಟೀಸವಾಲಿಗೆ

ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಆರೋಪಿತರ ಹೆಸರುಗಳು ತನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**23.** ಚಾಸಾ.10 ರವರನ್ನು ಪ್ರಾಸಾ.9 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.9 ರವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ನಿಪಿ-2ರಲ್ಲಿರುವ ಸಹಿಯನ್ನು 2020 ರಂದು ಚನ್ನರಾಯಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಪೋಲೀಸರು ಗಲಾಟೆಯ ಸಂಬಂಧ ಮಹಜರ್ ಮಾಡಲು ಬಂದಾಗ ಮಾಡಿರುತ್ತೇನೆ, ಆಗ ಸಮಯ ಬೆಳಿಗ್ಗೆ 11 ರಿಂದ 12 ಗಂಟೆಯಾಗಿತ್ತು, ತನ್ನ ಜೊತೆ ಸದರಿ ದಾಖಲಾತಿಗೆ ಯಾರು ಸಹಿ ಮಾಡಿದ್ದಾರೆ ನೆನಪಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**24.** ಪ್ರಾಸಾ.9 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.9 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ.9 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ನಿಪಿ.2 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಹಾಗೂ ಪೊಲೀಸರ ಕೋರಿಕೆ ಮೇರೆಗೆ ತಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**25.** ಚಾಸಾ.11 ರವರನ್ನು ಪ್ರಾಸಾ.10 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.10 ರವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ನಿಪಿ-3 ಕ್ಕೆ ಸಹಿಯನ್ನು ದಿಃ 17.03.2020 ರಂದು ಚನ್ನರಾಯಪಟ್ಟಣದ ತಾಲ್ಲೂಕು ಕಛೇರಿಯ 2ನೇ ಮಹಡಿಯಲ್ಲಿರುವ ಎ.ಡಿ.ಎಲ್.ಆರ್. ಕಛೇರಿಯಲ್ಲಿ ಮಾಡಿರುತ್ತೇನೆ, ಪೋಲೀಸರು ತನ್ನ ಸಮಕ್ಷಮ ಗಲಾಟೆಯ ವಿಡಿಯೋ ಫೂಟೇಜನ್ನು ಕಂಪ್ಯೂಟರಿನಿಂದ ಪೆಂಡ್ರೈವ್ ಹಾಕಿ ಅಮಾನತ್ತು ಪಡಿಸಿಕೊಂಡಿರುತ್ತಾರೆ, ಆಗ ಸಮಯ ಮಧ್ಯಾಹ್ನ 1.30 ರಿಂದ 1.45 ಗಂಟೆಯಾಗಿತ್ತು, ತನ್ನ ಜೊತೆ ಸದರಿ ದಾಖಲಾತಿಗೆ ಚಾಸಾ-9, 12 ರವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**26.** ಪ್ರಾಸಾ.10 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.10 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ.10 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**27.** ಚಾಸಾ.9 ರವರನ್ನು ಪ್ರಾಸಾ.11 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.11 ರವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ನಿಪಿ-3 ಕ್ಕೆ ಸಹಿಯನ್ನು ದಿಃ 17.03.2020 ರಂದು ಚನ್ನರಾಯಪಟ್ಟಣ ತಾಲ್ಲೂಕು ಕಛೇರಿಯ ಸರ್ವೆ ಕಛೇರಿಯಲ್ಲಿ ಗಲಾಟೆ ಸಂಬಂಧ ಪೋಲೀಸರು ಮಹಜರ್ ಮಾಡಲು ಬಂದಾಗ ಮಾಡಿರುತ್ತೇನೆ, ಸದರಿ ಗಲಾಟೆಯ ಸಂಬಂಧ ಸಿ.ಸಿ.ಟಿ.ವಿ ಯಲ್ಲಿ ದಾಖಲಾದ ದೃಶ್ಯಾವಳಿಗಳನ್ನು ತಾನು ಒಂದು ಡಿ.ವಿ.ಡಿ ಕ್ಯಾಸೆಟ್ಗೆ ಮತ್ತು ಚಾಸಾ-1 ರವರ ಮೊಬೈಲಿನಲ್ಲಿ ದಾಖಲಾಗಿದ್ದ ದೃಶ್ಯಾವಳಿಗಳನ್ನು ಮೊದಲು ಕಂಪ್ಯೂಟರಿಗೆ ವರ್ಗಾವಣೆ ಮಾಡಿಕೊಂಡು ಆನಂತರ ಅದನ್ನು ಡಿ.ವಿ.ಡಿ ಗೆ ವರ್ಗಾವಣೆ ಮಾಡಿ ಪೋಲೀಸರಿಗೆ ನೀಡಿರುತ್ತೇನೆ, ಆ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**28.** ಪ್ರಾಸಾ.11 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.11 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ.11 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಸದರಿ ಸಾಕ್ಷಿಯು ಚಾಸಾ.1 ರವರ ಮೊಬೈಲ್ ನಲ್ಲಿನ ದೃಶ್ಯಾವಳಿಗಳನ್ನು ಡಿವಿಡಿಗೆ ವರ್ಗಾವಣೆ ಮಾಡಿದ ಬಗ್ಗೆ ನುಡಿದಿರುತ್ತಾರೆ.

**29.** ಚಾಸಾ.12 ರವರನ್ನು ಪ್ರಾಸಾ.12 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.12 ರವರು ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ನಿಪಿ-3 ಕ್ಕೆ ಸಹಿಯನ್ನು ದಿಃ 17.03.2020 ರಂದು ಚನ್ನರಾಯಪಟ್ಟಣ ತಾಲ್ಲೂಕು ಕಛೇರಿಯ ಸರ್ವೆ ಕಛೇರಿಯಲ್ಲಿ ಗಲಾಟೆ ಸಂಬಂಧ ಪೋಲೀಸರು ಮಹಜರ್ ಮಾಡಲು ಬಂದಿದ್ದು, ಚಾಸಾ-9 ರವರು ಸಿ.ಸಿ. ಕ್ಯಾಮೆರಾದ ದೃಶ್ಯಾವಳಿಗಳನ್ನು ಡಿ.ವಿ.ಡಿ ಗೆ ವರ್ಗಾವಣೆ ಮಾಡಿದ್ದು, ಅದನ್ನು ಪೋಲೀಸರಿಗೆ

ನೀಡಿರುತ್ತಾರೆ, ಆಗ ಸಮಯ ಮದ್ಯಾಹ್ನ 1.30 ರಿಂದ 2.00 ಗಂಟೆ ಆಗಿತ್ತು, ಅದಕ್ಕೆ ತನ್ನ ಜೊತೆ ಚಾಸಾ-1,2,9,11 ರವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**30.** ಪ್ರಾಸಾ.12 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.12 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ.12 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಸದರಿಯವರು ಚಾಸಾ.9 ರವರು ಸಿ.ಸಿ ಕ್ಯಾಮರಾ ದೃಶ್ಯಾವಳಿಗಳನ್ನು ಡಿವಿಡಿಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ತಾನು ಹಾಜರಿದ್ದು ನಿಪಿ.3 ಕ್ಕೆ ಸಹಿ ಮಾಡಿದ ಬಗ್ಗೆ ನುಡಿದಿರುತ್ತಾರೆ. ಮುಂದುವರೆದು ದೃಶ್ಯಾವಳಿಗಳನ್ನು ಡಿಡಿಆರ್ ನಿಂದ ಮು.ಮಾ.1ಕ್ಕೆ ವರ್ಗಾವಣೆ ಮಾಡಿದ ಬಗ್ಗೆ ನುಡಿದಿದ್ದು, ಸದರಿ ಡಿಡಿಆರ್ ಯಾವ ಇಲಾಖೆಗೆ ಸೇರಿರುತ್ತದೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**31.** ಚಾಸಾ.14 ರವರನ್ನು ಪ್ರಾಸಾ.13 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.13 ರವರು ಠಾಣಾ ಸಿಬ್ಬಂಧಿಯಾಗಿದ್ದು ಘಟನೆಯ ಸಂಬಂಧ ನುಡಿದಿದ್ದು, ತಮ್ಮ ಸಾಕ್ಷ್ಯದಲ್ಲಿ, ದಿಃ 30.01.2021 ರಂದು ತಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-16 ರವರು ಚನ್ನರಾಯಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಗಲಾಟೆಯಾಗುತ್ತಿದೆ ಎಂದು ತಕ್ಷಣ ಭೇಟಿ ನೀಡುವಂತೆ ತನಗೆ ಮತ್ತು ಚಾಸಾ-15 ರವರಿಗೆ ಮೌಖಿಕವಾಗಿ ಆದೇಶಿದ ಮೇರೆಗೆ ತಾನು ಮತ್ತು ಚಾಸಾ-15 ರವರು ಸ್ಥಳಕ್ಕೆ ಹೋದಾಗ ತಾಲ್ಲೂಕು ಕಛೇರಿ ಮುಂಭಾಗ ಒಂದು ಕಾರಿನಲ್ಲಿ ಚಾಸಾ-1 ರವರು ಕುಳಿತ್ತಿದ್ದು, ಕಾರಿನ ಮುಂಭಾಗ ಸುಮಾರು 6-7 ಜನ ಕಾರನ್ನು ಅಡ್ಡಗಟ್ಟಿ ತೆಡೆದು ಚಾಸಾ-1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದು, ಆಗ ಚಾಸಾ-2 ಮತ್ತು 3 ರವರು ಕಾರು ಮುಂದೆ ಚಲಿಸಲು ದಾರಿ ಬಿಡಿಸಲು ಹೊದಾಗ ಮುಂದೆ ತಡೆದು ನಿಂತಿದ್ದ 6-7 ಜನರ ನಡುವೆ ಮಾತಿನ ಚಕಮಕಿ ನಡೆದಿರುತ್ತದೆ, ಅದರಲ್ಲಿದ್ದ 3 ಜನರು ಚಾಸಾ-2 ರವರ ಮೇಲೆ ಕೈಯಿಂದ ಹಲ್ಲೆ ಮಾಡಿ ನೂಕಾಡಿರುತ್ತಾರೆ, ತಾನು ಮತ್ತು ಚಾಸಾ-15 ರವರು ಚಾಸಾ-1 ರವರನ್ನು ಕಾರಿನಿಂದ ಇಳಿಸಿಕೊಂಡು ಕಛೇರಿ ಒಳಗಡೆ ಹೋಗಲು ಮೆಟ್ಟಿಲು ಹತ್ತುತ್ತಿದ್ದಾಗ ತಮ್ಮ ಹಿಂಭಾಗ ಬರುತ್ತಿದ್ದ ಚಾಸಾ-2 ರವರಿಗೆ ಕಾರನ್ನು ತಡೆದು 6-7 ಜನ ಅವಾಚ್ಯವಾಗಿ ಬೈಯುತ್ತ ಕೈಗಳಿಂದ ಹಲ್ಲೆ ಮಾಡಿ ನೂಕಾಡಿರುತ್ತಾರೆ, ನಂತರ ಚಾಸಾ-1 ರವನ್ನು ತಹಸೀಲ್ದಾರ್ ರವರ ಕಛೇರಿಗೆ ತಾವು ಕರೆದುಕೊಂಡು ಹೋದಾಗ 6-7 ಜನರು ಚಾಸಾ-2 ರವರನ್ನು ಅವಾಚ್ಯ ಶಬ್ದಗಳಿಂದ

ನಿಂದಿಸಿರುತ್ತಾರೆ, ನಂತರ ತಾನು ಮತ್ತು ಚಾಸಾ-15 ರವರು ಸದರಿ 6-7 ಜನರನ್ನು ಸಮಾಧಾನ ಮಾಡಿ ಹೊರಗೆ ಕರೆದುಕೊಂಡು ಬಂದಿರುತ್ತೇವೆ, ನಂತರ ಚಾಸಾ-1 ರವರು ಸರ್ಕಾರಿ ಕರ್ತವ್ಯ ನಿರ್ವಹಿಸುವಾಗ ಸದರಿ 6-7 ಜನರು ಅಡ್ಡಿಪಡಿಸಿರುತ್ತಾರೆ ಎಂದು ದೂರು ನೀಡಿರುವ ಬಗ್ಗೆ ತಿಳಿಯಿತು, ಈ ಸಂಬಂಧ ತಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**32.** ಪ್ರಾಸಾ.13 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಕಛೇರಿಯ ಮುಂಭಾಗ 50 ರಿಂದ 60 ಜನ ಇದ್ದರು ಎಂದು, ಅವಾಚ್ಯ ಶಬ್ದಗಳಿಂದ ಯಾರು ನಿಂದಿಸಿರುತ್ತಾರೆ ಎಂದು ಹೇಳಿಲ್ಲ ಎಂದು ನುಡಿದಿದ್ದು, ಚಾಸಾ.2 ರವರ ಮೇಲೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**33.** ಚಾಸಾ.15 ರವರನ್ನು ಪ್ರಾಸಾ.14 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.14 ರವರು ಠಾಣಾ ಸಿಬ್ಬಂಧಿಯಾಗಿದ್ದು ಘಟನೆಯ ಸಂಬಂಧ ನುಡಿದಿದ್ದು, ತಮ್ಮ ಸಾಕ್ಷ್ಯದಲ್ಲಿ, ದಿಃ30.01.2020 ರಂದು ತಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-16 ರವರು ಚನ್ನರಾಯಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಗಲಾಟೆಯಾಗುತ್ತಿದೆ ಎಂದು ತಕ್ಷಣ ಭೇಟಿ ನೀಡುವಂತೆ ತನಗೆ ಮತ್ತು ಚಾಸಾ-14 ರವರಿಗೆ ಮೌಖಿಕವಾಗಿ ಆದೇಶಿದ ಮೇರೆಗೆ ತಾನು ಮತ್ತು ಚಾಸಾ-14 ರವರು ಸ್ಥಳಕ್ಕೆ ಹೋದಾಗ ತಾಲ್ಲೂಕು ಕಛೇರಿ ಮುಂಭಾಗ ಒಂದು ಕಾರಿನಲ್ಲಿ ಚಾಸಾ-1 ರವರು ಕುಳಿತ್ತಿದ್ದು, ಕಾರಿನ ಮುಂಭಾಗ ಸುಮಾರು 6-7 ಜನ ಕಾರನ್ನು ಅಡ್ಡಗಟ್ಟಿ ತಡೆದು ನಿಂತಿದ್ದರು. ಆಗ ಚಾಸಾ-2 ಮತ್ತು 3 ರವರು ಕಾರು ಮುಂದೆ ಚಲಿಸಲು ದಾರಿ ಬಿಡಿಸಲು ಹೋದಾಗ ಮುಂದೆ ತಡೆದು ನಿಂತಿದ್ದ ಜನರ ಪೈಕಿ 3 ಜನ ಚಾಸಾ-2 ರವರನ್ನು ಎಳೆದಾಡಿ ತಳ್ಳಾಡಿರುತ್ತಾರೆ. ಉಳಿದರವರು ಚಾಸಾ-2 ರವರನ್ನು ಉದ್ದೇಶಿಸಿ ಬೈದಿರುತ್ತಾರೆ. ನಾನು ಮತ್ತು ಚಾಸಾ-14 ರವರು ಚಾಸಾ-1 ರವರನ್ನು ಕಾರಿನಿಂದ ಇಳಿಸಿಕೊಂಡು ಕಛೇರಿ ಒಳಗಡೆ ಹೋಗಲು ಮೆಟ್ಟಿಲು ಹತ್ತುತ್ತಿದ್ದಾಗ ತಮ್ಮ ಹಿಂಭಾಗ ಬರುತ್ತಿದ್ದ ಚಾಸಾ-2 ರವರಿಗೆ ಸದರಿಯವರಲ್ಲಿ 3 ಜನ ಎಳೆದಾಡಿ ಕೈಯಿಂದ ಹೊಡೆದಿರುತ್ತಾರೆ, ನಂತರ ತಾನು ಮತ್ತು ಚಾಸಾ-14 ರವರು ಚಾಸಾ-1 ರವನ್ನು ತಹಸೀಲ್ದಾರ್ ರವರ ಕಛೇರಿಗೆ ತಾವು ಕರೆದುಕೊಂಡು ಹೋದಾಗ 6-7 ಜನರು ಕೂಗಾಡಿರುತ್ತಾರೆ, ನಂತರ ತಾನು ಮತ್ತು ಚಾಸಾ-14 ರವರು ಸದರಿ 6-7 ಜನರನ್ನು ಸಮಾಧಾನ ಮಾಡಿ ಹೊರಗೆ ಕರೆದುಕೊಂಡು ಬಂದಿರುತ್ತೇವೆ, ನಂತರ ಚಾಸಾ-1 ರವರು ಸರ್ಕಾರಿ ಕರ್ತವ್ಯ ನಿರ್ವಹಿಸುವಾಗ ಸದರಿ 6-7 ಜನರು ಅಡ್ಡಿಪಡಿಸಿರುತ್ತಾರೆ ಮತ್ತು

ಚಾಸಾ-2 ರವರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ದೂರು ನೀಡಿರುವ ಬಗ್ಗೆ ತಿಳಿಯಿತು, ಈ ಸಂಬಂಧ ತಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**34.** ಪ್ರಾಸಾ.14 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದ್ದು ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಕಛೇರಿಯ ಮುಂಭಾಗ 50 ರಿಂದ 60 ಜನ ಇದ್ದರು ಎಂದು, ಅವಾಚ್ಯ ಶಬ್ದಗಳಿಂದ ಯಾರು ನಿಂದಿಸಿರುತ್ತಾರೆ ಎಂದು ಹೇಳಿಲ್ಲ ಎಂದು ನುಡಿದಿದ್ದು, ಚಾಸಾ.2 ರವರ ಮೇಲೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿಲ್ಲ ಹಾಗೂ ಚಾಸಾ.1 ರವರನ್ನು ಯಾರು ನೂಕಾಡಿದರು ಎಂದು ಹೇಳಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ.

**35.** ಚಾಸಾ.17 ರವರನ್ನು ಪ್ರಾಸಾ.15 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.15 ರವರು ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ತಾವು ತನಿಖೆಯನ್ನು ಕೈಗೊಂಡ ಬಗ್ಗೆ ಮತ್ತು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ.

**36.** ಪ್ರಾಸಾ.1 ರವರು ಪ್ರಕರಣದ ಪಿರ್ಯಾದುದಾರು ಹಾಗೂ ಮಹಜರ್ ಸಾಕ್ಷಿದಾರರಾಗಿದ್ದು ಭಾಗಶಃ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಪ್ರಾಸಾ.2 ರಿಂದ 8 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಭಾಗಶಃ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಪ್ರಾಸಾ.9 ಮತ್ತು 10 ಮಹಜರ್ ಸಾಕ್ಷಿದಾರರಾಗಿದ್ದು ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಸದರಿ ಪ್ರಕರಣದಲ್ಲಿ ಅಭಿಯೋಜನೆಯು ಚಾಸಾ.1 ರವರ ಮೊಬೈಲ್ ಹಾಗೂ ಸಿ.ಸಿ ಕ್ಯಾಮರಾ ದೃಶ್ಯಾವಳಿಗಳನ್ನು ಡಿವಿಡಿಗೆ ವರ್ಗಾವಣೆ ಮಾಡಿದ್ದು, ಸದರಿ ದೃಶ್ಯಾವಳಿಗಳನ್ನು ವಿಚಾರಣೆಯ ಕಾಲಕ್ಕೆ ತನಿಖಾಧಿಕಾರಿಗಳ ಮೂಲಕ ರುಜುವಾತು ಪಡಿಸಿರುವುದಿಲ್ಲ. ಅಲ್ಲದೇ ಈ ಪ್ರಕರಣದಲ್ಲಿ ಚಾಸಾ.1 ರವರು ಪಿರ್ಯಾದುದಾರರು ಹಾಗೂ ಮಹಜರ್ ಸಾಕ್ಷಿದಾರರಾಗಿದ್ದು, ಚಾಸಾ.2 ರಿಂದ 8 ರವರ ಪ್ರತ್ಯಕ್ಷ ಸಾಕ್ಷಿದರರಾಗಿದ್ದು, ಚಾಸಾ.1 ರಿಂದ 8 ರವರು ಚನ್ನರಾಯಪಟ್ಟಣ ತಾಲ್ಲೂಕು ಕಛೇರಿಯ ಸಿಬ್ಬಂಧಿಯವರಾಗಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಈಗ್ಗೆ ಸಾಕ್ಷ್ಯದಾರರು ಅಭಿಯೋಜನಗೆ ಪೂರಕವಾದ ಯಾವುದೇ ಸಾಕ್ಷ್ಯ ನೀಡದ ಕಾರಣ ಅಭಿಯೋಜನೆಯು ಆರೋಪಿತರ ಮೇಲಿನ ಆರೋಪಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತದೆ. ಈ ಮೇಲೆ ಚರ್ಚಿಸಿರುವಂತೆ

ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂಬ ಸ್ಪಷ್ಟ ಅಭಿಪ್ರಾಯಕ್ಕೆ ಬಂದು **ಅಂಶ ಸಂಖ್ಯೆ 1 ರಿಂದ 3 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

**37. ಅಂಶ ಸಂಖ್ಯೆ ಃ 6** ಅಂಶ 1 ರಿಂದ 5 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

**ಃಃ ಆದೇಶ ಃಃ**

ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿತರು **ಭಾ.ದಂ.ಸಂ. ಕಲಂಃ 341, 353, 323, 504, 506 ಸಹವಾಚಕ ಕಲಂಃ 149** ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳು ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಮು.ಮಾ.1 ಡಿ.ವಿ.ಡಿಯಾಗಿದ್ದು, ಸದರಿ ದಾಖಲೆಯನ್ನು ಕಡತದಲ್ಲಿ ಅಳವಡಿಸಿಕೊಳ್ಳತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ **08ನೇ ಜುಲೈ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**: : ಪರಿಚ್ಛೇದ : :**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

| | | |
|---|---|---|
| ಪ್ರಾಸಾ.1 | : | ಶಂಶುದ್ದೀನ್ ಕೆ.ಪಿ |
| ಪ್ರಾಸಾ.2 | : | ಬ್ರಿಜೇಶ್ ಕುಮಾರ್ ಎ.ಬಿ |
| ಪ್ರಾಸಾ.3 | : | ಬೊಮ್ಮೇಗೌಡ |
| ಪ್ರಾಸಾ.4 | : | ಲೀಲಾವತಿ ಕೆ.ಎ |
| ಪ್ರಾಸಾ.5 | : | ದಿವ್ಯಶ್ರೀ ಕೆ.ಎ |
| ಪ್ರಾಸಾ.6 | : | ಗೀತಾಂಜಲಿ ಎಂ |
| ಪ್ರಾಸಾ.7 | : | ಪ್ರವೀಣ್ ಎಂ |
| ಪ್ರಾಸಾ.8 | : | ಅಖಿಲ್ ಅಹಮದ್ ಎನ್.ಎಂ |

ಪ್ರಾಸಾ.9 : ಮಂಜುನಾಥ ಬಿ.ಜೆ
ಪ್ರಾಸಾ.10 : ಮೋಹನ್ ಕುಮಾರ್
ಪ್ರಾಸಾ.11 : ಸತ್ಯಸದಾನಂದ
ಪ್ರಾಸಾ.12 : ಕೃಷ್ಣಕುಮಾರ್
ಪ್ರಾಸಾ.13 : ರಂಗಸ್ವಾಮಿ
ಪ್ರಾಸಾ.14 : ಸತೀಶ್ ಕುಮಾರ್
ಪ್ರಾಸಾ.15 : ಲಕ್ಷ್ಮೀಗೌಡ

**2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

ನಿಪಿ.1 : ದೂರು
ನಿಪಿ.1(ಎ) : ಸಹಿ
ನಿಪಿ.2 : ಕೃತ್ಯ ಸ್ಥಳ ಮಹಜರ್
ನಿಪಿ.2(ಎ,ಬಿ) : ಸಹಿಗಳು
ನಿಪಿ.3 : ಅಮಾನತ್ತು ಮಹಜರ್
ನಿಪಿ.3(ಎ,ಬಿ,ಸಿ,ಡಿ,ಇ): ಸಹಿಗಳು
ನಿಪಿ.4 : ಪ್ರಾಸಾ.2 ರವರ ಹೇಳಿಕೆ
ನಿಪಿ.5 : ಪ್ರಾಸಾ.3 ರವರ ಹೇಳಿಕೆ
ನಿಪಿ.6 : ಪ್ರಾಸಾ.4 ರವರ ಹೇಳಿಕೆ
ನಿಪಿ.7 : ಪ್ರಾಸಾ.5 ರವರ ಹೇಳಿಕೆ
ನಿಪಿ.8 : ಪ್ರಾಸಾ.6 ರವರ ಹೇಳಿಕೆ
ನಿಪಿ.9 : ಪ್ರಾಸಾ.7 ರವರ ಹೇಳಿಕೆ
ನಿಪಿ.10 : ಪ್ರಾಸಾ.10 ರವರ ಹೇಳಿಕೆ
ನಿಪಿ.11 : ಪ್ರಮಾಣ ಪತ್ರ
ನಿಪಿ.11(ಎ) : ಸಹಿ
ನಿಪಿ.12 : ಮನವಿ ಪತ್ರ
ನಿಪಿ.13 : ಹಾಜರಾತಿ ದೃಢೀಕರಣ ಪತ್ರ
ನಿಪಿ.14 : ಹಾಜರಾತಿ ಪುಸ್ತಕದ ದೃಢೀಕರಣ ಪತ್ರದ ನಕಲು
ನಿಪಿ.15 : ಹಾಸನ ಜಿಲ್ಲಾಧಿಕಾರಿಯಮ 11ಇ ನಕ್ಷೆ ಸಂಬಂಧ ನೀಡಿದ ಪತ್ರ
ನಿಪಿ.15(ಎ) : ಸಹಿ
ನಿಪಿ.16 : ಪ್ರಥಮ ವರ್ತಮಾನ ವರದಿ

**3. ಆರೋಪಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ :**ಇಲ್ಲ

**4. ಆರೋಪಿಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ :** ಇಲ್ಲ

**5. ಅಭಿಯೋಜನೆಯ ಪರ ಗುರುತಿಸಲಾದ ಮುದ್ದೇಮಾಲುಗಳ ಪಟ್ಟಿ :**

ಮು.ಮಾ.1 -ಃ ಡಿ.ವಿ.ಡಿ

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**(ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**
**(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.)**

**ಃ ಆದೇಶ ಃ**

ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿತರು **ಭಾ.ದಂ.ಸಂ. ಕಲಂಃ 341, 353, 323, 504, 506 ಸಹವಾಚಕ ಕಲಂಃ 149** ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳು ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಮು.ಮಾ.1 ಡಿ.ವಿ.ಡಿಯಾಗಿದ್ದು, ಸದರಿ ದಾಖಲೆಯನ್ನು ಕಡತದಲ್ಲಿ ಅಳವಡಿಸಿಕೊಳ್ಳತಕ್ಕದ್ದು.

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.